Prajavani 27th DEC 2014.
Saturday.

ರ್ಯಕ್ರಮ

19ನೇ
ಬಿಹಾರಿ
ನಾಚಣೆ
ರ್ಯಕರ್ತರು

# ಮಹಾನಗರ



## ಸನ್ಮಾನ

ಮಾಗಡಿ ತಾಲ್ಲೂಕಿನ ಚಂದೂರಾಯನ ಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಂಗಳವಾರ ನಡೆದ ರೈತ ದಿನಾಚರಣೆಯಲ್ಲಿ ಪ್ರಗತಿಪರ ರೈತ ಎಂ.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು



PACHUARI ADDRESSESS
@rvce

# 'ಪರಿಸರ ಕಾನೂನು ದುರ್ಬಲಕ್ಕೆ ಕೇಂದ್ರ ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿ ಚಟುವಟಿಕೆಗಳಿಗೆ ವೇಗ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಪರಿಸರ ಸಂರಕ್ಷಣಾ ಕಾನೂನುಗಳನ್ನು ದುರ್ಬಲಗೊಳಿಸಲು ಮುಂದಾಗಿದೆ' ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಆರೋಪಿಸಿದರು.

ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಆಶ್ರಯದಲ್ಲಿ ನಗರದಲ್ಲಿ ಶುಕ್ರವಾರ ನಡೆದ ಪರಿಸರ ಸಂಶೋಧನೆಯ ಏಳನೇ ಅಂತರರಾಷ್ಟ್ರೀಯ ಸಮ್ಮೇಳನವನ್ನು (ಐಸಿಇಆರ್) ಉದ್ಘಾಟಿಸಿ ಅವರು ಮಾತನಾಡಿದರು.

ಅರಣ್ಯ ಹಕ್ಕು ಕಾಯ್ದೆ, ಪರಿಸರ ನಿಯಂತ್ರಣ ಕಾಯ್ದೆಗಳನ್ನು ದುರ್ಬಲಗೊಳಿಸಲು ಮುಂದಾಗಿರುವುದು ದೊಡ್ಡ ಬೆದರಿಕೆ. ಈ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

'ಕಾರ್ಪೊರೇಟ್ ಸಂಸ್ಥೆಗಳ ಗುರಿ ಲಾಭ ಗಳಿಕೆ ಮಾತ್ರವೇ ಆಗಿರುತ್ತದೆ. ಪರಿಸರ ಸಂರಕ್ಷಿಸಿ ಜನರ ಸಮಗ್ರ ಅಭಿವೃದ್ಧಿ ಮಾಡುವುದು ಸರ್ಕಾರಗಳ ಕರ್ತವ್ಯ. ಆದರೆ, ಸರ್ಕಾರಗಳು ಜಿಡಿಪಿ ಅಭಿವೃದ್ಧಿಯ ಉದ್ದೇಶದಿಂದ ಕೈಗಾರಿಕಾ ಚಟುವಟಿಕೆ, ಉದ್ಯಮಕ್ಕೆ ಉತ್ತೇಜನ ಮತ್ತಿತರ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತವೆ. ಇದರಿಂದ ಪರಿಸರ ನಾಶವಾಗುತ್ತಿದೆ' ಎಂದು ಕಳವಳ




ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಲ್ಲಿ ಶುಕ್ರವಾರ ನಡೆದ ಪರಿಸರ ಸಂಶೋಧನೆಯ ಏಳನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ (ಐಸಿಇಆರ್) ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಸ್ಮರಣಸಂಚಿಕೆ ಬಿಡುಗಡೆ ಮಾಡಿದರು. ಐಸಿಇಆರ್ ನಿರ್ದೇಶಕ ಪ್ರೊ.ಸುಭಾಷ್ ಸಿ.ಪಾಂಡೆ, ಹಿರಿಯ ಪರಿಸರವಾದಿ ಡಾ.ಆರ್.ಕೆ. ಪಚೌರಿ, ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಎಸ್. ಸತ್ಯನಾರಾಯಣ ಚಿತ್ರದಲ್ಲಿದ್ದಾರೆ –ಪ್ರಜಾವಾಣಿ ಚಿತ್ರ

ವ್ಯಕ್ತಪಡಿಸಿದರು. ಅನುಮತಿ ನೀಡಲು ಸ್ವತಂತ್ರ ನಿಯಂತ್ರಣಾ ಪ್ರಾಧಿಕಾರ ರಚಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಒಂದು ವರ್ಷ ಕಳೆದರೂ ಪ್ರಾಧಿಕಾರ ರಚನೆ ಆಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಇತ್ತೀಚಿನ ವರ್ಷಗಳಲ್ಲಿ ಜಲ ವಿದ್ಯುತ್ ಯೋಜನೆಗಳಿಗೆ ಹೆಚ್ಚಿನ

'ಎಲ್ಲ ಸರ್ಕಾರಗಳು ಗಣಿಗಾರಿಕೆಗೆ ಉತ್ತೇಜನ ನೀಡುತ್ತಿವೆ. ಧಾರಣಾ ಶಕ್ತಿಗಿಂತ ಹೆಚ್ಚಿನ ಸಂಖ್ಯೆಯ ಕಲ್ಲಿದ್ದಲು ಗಣಿಗಳು ದೇಶದಲ್ಲಿ ಇವೆ. ಈಗ ಮತ್ತಷ್ಟು ಗಣಿಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ಆರಂಭವಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಹಿರಿಯ ಪರಿಸರವಾದಿ ಡಾ.ಆರ್.ಕೆ. ಪಚೌರಿ ಮಾತನಾಡಿ, 'ಈಗಿನ

ಕ್ಷೇತ್ರ ಶೇ 24, ಕೈಗಾರಿಕೆ ಶೇ 21, ಸಾರಿಗೆ ಕ್ಷೇತ್ರ ಶೇ 14, ಕಟ್ಟಡಗಳ ಪಾಲು ಶೇ 6.4 ಆಗಿದೆ' ಎಂದರು.

'ದೇಶದಲ್ಲಿ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಬೇಕು. ಜನರ ಮನೋಭಾವ ಬದಲಾಗಬೇಕು' ಎಂದು ಕಿವಿಮಾತು ಹೇಳಿದರು.

ಐಸಿಇಆರ್ ನಿರ್ದೇಶಕ ಪ್ರೊ. ಸುಭಾಷ್ ಸಿ.ಪಾಂಡೆ, ಸಮ್ಮೇಳನದ

## ಚರ್ಚೆ ಅಗತ್ಯ

ಪಶ್ಚಿಮ ಘಟ್ಟ ಸಂರಕ್ಷಣೆಯ ಕುರಿತ ಪ್ರೊ.ಮಾಧವ ಗಾಡ್ಗಿಳ್ ಹಾಗೂ ಡಾ.ಕಸ್ತೂರಿ ರಂಗನ್ ವರದಿಗಳ ಬಗ್ಗೆ ವ್ಯಾಪಕ ಪ್ರಮಾಣದಲ್ಲಿ ಪಾರದರ್ಶಕವಾಗಿ ಸಾರ್ವಜನಿಕ ಚರ್ಚೆ ಆಗಬೇಕು ಎಂದು ಹಿರಿಯ ಪರಿಸರವಾದಿ ಡಾ.ಆರ್.ಕೆ. ಪಚೌರಿ ಸಲಹೆ ನೀಡಿದರು.

ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ವಿಷಯದಲ್ಲೂ ಜನರು ಸರ್ಕಾರದ ಮೇಲೆ ಅವಲಂಬಿತರಾಗಬಾರದು. ಯಾವುದು ಸೂಕ್ತ ಎಂಬುದನ್ನು ಅವರೇ ನಿರ್ಧರಿಸಬೇಕು ಎಂದರು.

## 'ಹಗಲು ರಾತ್ರಿ ವ್ಯತ್ಯಾಸ'

'ಪರಿಸರ ನಾಶ ಮಾಡುವ ಕೈಗಾರಿಕೆಗಳ ಪ್ರಾಯೋಜಕತ್ವದಲ್ಲೇ ಹೆಚ್ಚಿನ ಪರಿಸರ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿವೆ' ಎಂದು ಪ್ರಶಾಂತ್ ಭೂಷಣ್ ಕಳವಳ ವ್ಯಕ್ತಪಡಿಸಿದರು.

'ಸ್ವತಂತ್ರ ಸಂಶೋಧಕರ ಸಂಖ್ಯೆ ಭಾರಿ ಕಡಿಮೆ ಇದೆ. ಕಂಪೆನಿ ಪ್ರಾಯೋಜಿತ ಸಂಶೋಧಕರು ಕಂಪೆನಿಗಳ ಪರವಾಗಿಯೇ ಡಂಗುರ ಸಾರುತ್ತಾರೆ. ಸ್ವತಂತ್ರ ಸಂಶೋಧಕರು ವಾಸ್ತವಿಕ ಅಂಶಗಳನ್ನು